ಮೊದಲು 'ಯಾಕೆ ಹೀಗಾಯ್ತು' ಅಂತ ಯೋಚನೆ ಮಾಡ್ಬೇಕು. 50 ವರ್ಷದ ಹಿಂದೆ ಈ ಸ್ಥಿತಿ ಇರಲಿಲ್ಲ. ಕನ್ನಡ ಮಾತ್ನಾಡೋರು, ಬರೆಯೋರು ಯಾವುದೇ ಒಂದು ವ್ಯಾಕರಣ ಬದ್ಧತೆ, ಶುಭ್ರತೆ, ಸಂಸ್ಕೃತಿ ಎಲ್ಲವನ್ನೂ ಗಮನಿಸ್ತಾ ಇದ್ರು. ಯಾರು ಸಿದ್ಧತೆ ಇಲ್ದೆ ಇರುವಾಗ ಬರೆಯೋಕೆ ಶುರು ಮಾಡ್ತಾರೋ ಆವಾಗ ಭಾಷೆಯ ಪ್ರಭಾವ ಕಡಿಮೆಯಾಗ್ತದೆ. ನಾನು ಇಲ್ಲಿ ಎಲ್ಲರನ್ನೂ ಬೈತಾ ಇಲ್ಲ. ಎಲ್ಲವನ್ನೂ ಚೆನ್ನಾಗಿ ಅಭ್ಯಾಸ ಮಾಡಿ, ಚೆನ್ನಾಗಿ ಬರೆಯೋರು ಸಾಕಷ್ಟು ಜನ ನಮ್ಮಲ್ಲಿ ಇದ್ದಾರೆ. ಬಹುಶಃ ಭಾರತ ದೇಶದಲ್ಲಿಯೇ ಆಗ್ದೇ ಇರೋವಷ್ಟು ಸಂಸ್ಕೃತ ಸಾಹಿತ್ಯ ರಚನೆ ನಮ್ಮಲ್ಲಿ ಆಗಿದೆ. ಬಂಗಾಲದಲ್ಲೂ ಕೂಡ ಅಷ್ಟಿಲ್ಲ. ನಮಗನಿಸುತ್ತೆ ಮರಾಠಿ ಭಾಷೆ, ಕನ್ನಡ ಭಾಷೆ, ತಮಿಳು ಭಾಷೆ ಬೆಳೆದಿರುವಷ್ಟು ಇತರೆ ಭಾಷೆಗಳು ಬೆಳೆಯಲೇ ಇಲ್ಲ. ಹಿಂದಿಯಲ್ಲಿ ಬೇಕಾದಷ್ಟು ಸವಲತ್ತುಗಳಿವೆ. ಸರ್ಕಾರದ ಸವಲತ್ತಿನಿಂದ ಬೆಳವಣಿಗೆ ಹೆಚ್ಚಾಗಿದೆ. ಗೌರವವೂ ಹೆಚ್ಚಾಗಿದೆ. ಕನ್ನಡದಲ್ಲಿ ಇವೆಲ್ಲ ಕಡಿಮೆಯಾಗಿದೆ.

ಬಿ.ಎಂ.ಶ್ರೀಯವರ ಬರವಣಿಗೆಯ ನಂತರ 20– 30 ವರ್ಷ ಕನ್ನಡ ಬರವಣಿಗೆ ತುಂಬಾ ಚೆನ್ನಾಗಿ ಆಯ್ತು. ನವೋದಯ ಕಾಲದಲ್ಲಿ ಬಂದಂತಹವು ಇಂದಿಗೂ ಕೂಡ ಅಚ್ಚುಕಟ್ಟಾಗಿವೆ. ನವ್ಯ ಕಾಲದಲ್ಲಿ ಕನ್ನಡಕ್ಕೆ ಇನ್ನಷ್ಟು ವೈವಿಧ್ಯ ತಂದುಕೊಟ್ಟರು. ಅಂದ್ರೆ ಹೊಸ ಹೊಸ ಶಬ್ದಗಳನ್ನು ತುಂಬುವುದು, ಹಳೆ ಶಬ್ದಗಳ ರೀತಿಯಲ್ಲಿ ಬದಲಾವಣೆ ಮಾಡುವುದು ಇತ್ಯಾದಿ. ಅಡಿಗರ ಮೂಲಕ ನಮ್ಮ ಭಾಷೆಗೆ ನಾವೀನ್ಯವೇನೋ ಬಂತು. ಆದರೆ ನವ್ಯವನ್ನು ಆರಿಸಿಕೊಂಡ



ರೀತಿ ಎಲ್ಲರನ್ನೂ ಮುಟ್ಟುವಂಥ ರೀತಿಯಾಗಿರಲಿಲ್ಲ. ನವೋದಯ ಬಂದರೂ ಕೂಡ ಅದಕ್ಕೆ ಪೋಷಕವಾದಂತಹ, ವಿರುದ್ಧವಲ್ಲದ ಒಂದು ಆಂದೋಲನ ನಡೆಯಿತು. ಅದೇ ಪ್ರಗತಿಪರ ಚಳವಳಿ. ಆಗ ಜನಸಾಮಾನ್ಯರ ಭಾಷೆ ಉಪಯೋಗ ಮಾಡಿಕೊಂಡರು. ದಲಿತರ ಉದ್ಧಾರಕ್ಕೋಸ್ಕರವಾಗಿ ಆಂದೋಲನ ಆಯಿತು. ಆದ್ರೆ ಸಾಹಿತ್ಯದಲ್ಲಿ ದಲಿತರ ಉದ್ಧಾರ ಎನ್ನುವುದು ದಲಿತರ ಭಾಷೆಯ ಉದ್ಧಾರವಲ್ಲ. ಕಾರಂತರು 'ಚೋಮನ ದುಡಿ'ಯನ್ನು ಬರೆದ್ರೆ ಅಲ್ಲಿ ಚೋಮನ ಉದ್ಧಾರ ಆಗ್ಬೇಕಂತ ಅವರ ದೃಷ್ಟಿ ಇತ್ತು. ಚೋಮನ ಭಾಷೆ ಗಮನಕ್ಕೆ ಬರಲಿಲ್ಲ. ಚೋಮ ಸಮಾಜದಲ್ಲಿ ಯೋಗ್ಯನಾಗಿ ಬದುಕಬೇಕು ಅನ್ನೋ ಆಸೆಯಿಂದ ಬರೆದದ್ದು. ಆದ್ರೆ ಅವನು ಹಾಗೆ ಬದುಕಲು ಆಗಲೇ ಇಲ್ಲ. ಆ ಕಾದಂಬರಿಯ ಕೊನೆಯಲ್ಲಿ ದುರಂತ ಆಗುತ್ತೆ. ಆಮೇಲೆ ದಲಿತರೇ ಬರೆಯೋಕೆ ಪ್ರಾರಂಭ ಮಾಡಿದ್ರು. ಆಗ ಸಾಹಿತ್ಯದಲ್ಲಿ ಕ್ರೋಧ, ಉದ್ವೇಗ, ರೋಷ ಎಲ್ಲಾ ತುಂಬಿಕೊಂಡಿತು. ಭಾಷೆ ಸ್ವಲ್ಪ ನೀರಾಯಿತು. ಈಗ ಅವರೂ ಬದಲಾಗಿದ್ದಾರೆ.

ನಮ್ಮ ಮಾಧ್ಯಮಗಳು ಆಕಾಶವಾಣಿ, ದೂರದರ್ಶನ, ಪತ್ರಿಕೆಗಳು ಎಲ್ಲವೂ ಸೇರಿ ಭಾಷೆಯನ್ನು ಇನ್ನಷ್ಟು ನೀರಾಗಿ ಮಾಡುತ್ತಿವೆ. ಕಾರಣವೇನೆಂದರೆ ಅವರಿಗೆ ಯಾವ ಪದ ಸರಿ, ಯಾವ ಪದ ತಪ್ಪು ಅನ್ನುವುದು ಗೊತ್ತಿರುವುದಿಲ್ಲ. ಭಾಷೆಯನ್ನು ಬೆಳೆಸುವ ಮಾರ್ಗದಲ್ಲಿ ತಪ್ಪುಗಳಿಗೆ ಅವಕಾಶ ಮಾಡ್ತಾ ಇದ್ದಾರೆ. ಯಾರೋ ನಾಲ್ಕು ಜನ ಈಕರಣ ಸೇರಿಸಿಕೊಂಡು ಸಬಲೀಕರಣ, ಅಗಲೀಕರಣಗಳು ನುಸುಳಿವೆ. ನಾವು ಸರಿಯಾಗಿ ವ್ಯಾಕರಣ ಅಭ್ಯಾಸ ಮಾಡಬೇಕು. ಪ್ರೌಢಶಾಲೆಯಲ್ಲೂ ಅಚ್ಚುಕಟ್ಟಾದಂತಹ ಅಧ್ಯಾಪಕರು ಇರಬೇಕು. ಪ್ರತಿಯೊಂದು ಪತ್ರಿಕೆಯಲ್ಲೂ ತಪ್ಪನ್ನು ಕಂಡುಹಿಡಿದು ತೋರಿಸತಕ್ಕಂಥ ಒಬ್ಬ ವಿದ್ವಾಂಸನನ್ನು ಇಟ್ಟುಕೊಳ್ಳಬೇಕು. ಆಗ ತಪ್ಪು ತಿದ್ದಿಕೊಳ್ಳಲು ಸಾಧ್ಯ.

**★ *ಕನ್ನಡ ನಿಘಂಟು ಕ್ಷೇತ್ರದ ಅನುಭವದ ಹಿನ್ನೆಲೆಯಲ್ಲಿ ತಮ್ಮ ಅನಿಸಿಕೆ?***

ನಿಘಂಟು ಕ್ಷೇತ್ರ ತುಂಬಾ ವ್ಯಾಪಕವಾದದ್ದು. ನನ್ನ ನಿಘಂಟಿನ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ಇಪ್ಪತ್ತು ವರ್ಷ ಕೆಲಸ ಮಾಡಿದ ನನಗೆ ಇವತ್ತೂ ಆ ನಿಘಂಟನ್ನು ನೋಡಿದ್ರೆ ಅದರಲ್ಲಿ ಅನೇಕ ತಪ್ಪುಗಳು ಕಂಡುಬರುತ್ತವೆ. ಅದನ್ನು ತಿದ್ದಬೇಕು ಅಂತ ನನಗನ್ನಿಸುತ್ತದೆ. ನಿಘಂಟಿಗೋಸ್ಕರ ಒಂದು ಶಾಶ್ವತವಾದ ಇಲಾಖೆ ಇರಬೇಕು. ಅದು ಆಗದೇ ಹೋದರೆ ನಮ್ಮ ತಪ್ಪನ್ನು ತಿದ್ದುತ್ತಾ ಹೋಗಬೇಕು. ಆಕ್ಸಫರ್ಡ್ ವಿಶ್ವವಿದ್ಯಾಲಯದ ನಿಘಂಟು ಈಗ 150ನೇ ವರ್ಷ ದಾಟಿದೆ. ಅದಕ್ಕೆ ದೊಡ್ಡ ಕಚೇರಿ ಇದೆ. ಒಟ್ಟು ಪ್ರಪಂಚದಲ್ಲಿ ಸುಮಾರು 600 ಜನ ಅದಕ್ಕೆ ಸಹಾಯ ಮಾಡುತ್ತಿದ್ದಾರೆ. ಕಚೇರಿಯೊಳಗೆ ಸುಮಾರು 120 ಸಂಪಾದಕರು ಇದ್ದಾರೆ.

ನಮ್ಮಲ್ಲಿ ನಿಘಂಟು ಕ್ಷೇತ್ರಕ್ಕೆ ಬರೋರು ಯಾರಿದ್ದಾರೆ! ಅದಕ್ಕೆ ದುಡ್ಡು ಇಲ್ಲ, ಗೌರವ ಇಲ್ಲ. ಆ ಕಡೆ ಯಾರೂ ತಿರುಗಿ ನೋಡೋದಿಲ್ಲ. ನನ್ನಂಥೋರು ಇರಬೇಕು ಅಷ್ಟೇ! ಈಗ ಆಗಿರುವ ಕೆಲಸ ಒಂದೊಂದು ಶತಮಾನದಲ್ಲಿ ಆಗುವ ಬೆಳವಣಿಗೆ. 'ನೀನು ಬದುಕಿರುವಾಗ ನಿಘಂಟನ್ನು ಮುಗಿಸಿದ್ರೆ ನೀನೇ ಪುಣ್ಯವಂತ' ಎಂದೊಬ್ಬರು ಹೇಳಿದ್ದರು. ಸರ್ಕಾರ, ಜನ ಈ ಕಡೆ ಗಮನ ಕೊಟ್ಟು ಶಾಶ್ವತವಾದ ನಿಘಂಟು ಕಚೇರಿ, ಸರಿಯಾದ ವಿದ್ವಾಂಸರನ್ನು ತಂದು ಹಾಕಿದ್ರೆ ಸೊಗಸಾದ ಸಾಧನೆ ಮಾಡಬಹುದು.

**★ *ಇಂದಿನ ಕನ್ನಡ ಪತ್ರಿಕಾ ಕ್ಷೇತ್ರದಲ್ಲಿ ಅಂಕಣ ಬರಹಗಳಿಗೆ ದೊರೆಯುತ್ತಿರುವ ಮನ್ನಣೆ ಮತ್ತು ಭವಿಷ್ಯ ಹೇಗಿದೆ?***

ಈಗ ವೃತ್ತಪತ್ರಿಕೆಗಳು ರಾಜಕೀಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡುತ್ತಿವೆ. ಅಂಕಣ ಬರಹ ರಾಜಕೀಯಕ್ಕೆ ಸೇರಿದ್ದಲ್ಲ. ಇದಕ್ಕೆ ವಿಶಿಷ್ಟವಾದ ಸ್ಥಾನವಿದೆ. ಇದು ಬೇರೆ ಬೇರೆ ವಿಚಾರಗಳಿಗೆ, ಸಂಸ್ಕೃತಿಗೆ, ಭಾಷೆಗೆ, ವಿಮರ್ಶೆಗೆ ಸಂಬಂಧಿಸಿದ್ದಾಗಿರುತ್ತದೆ. ಈಚೆಗೆ ಅಂಕಣ ಬರಹ ಸ್ವಲ್ಪ ಕಡಿಮೆ ಆಗ್ತಾ ಇದೆ. ಕೆಲವು ಪತ್ರಿಕೆಗಳಲ್ಲಿ ಒಂದೊಂದು ವಾರ ಇಂಥಾದ್ದೇ ಬರಬೇಕೆಂದು ವಿಷಯ ಇಟ್ಕೊಂಡಿದ್ದಾರೆ. ಬೇರೆ ಬೇರೆ ವಿದ್ವಾಂಸರು ಇದಕ್ಕೆ ಬರೆಯುತ್ತಾರೆ. ಹಾ.ಮಾ.ನಾ. ಬರೆಯುತ್ತಿದ್ದ 'ಸಂಪ್ರತ' ಅಂಕಣ ಜ್ಞಾಪಿಸಿಕೊಂಡರೆ ಅವರು ಎಷ್ಟು ಅಭ್ಯಾಸ ಮಾಡುತ್ತಾ ಇದ್ರು ಅಂತ ಗೊತ್ತಾಗುತ್ತದೆ. ಅಂಕಣ ಬರಹ ಅಷ್ಟು ಸುಲಭ ಅಲ್ಲ.

**★ *ಸಾಹಿತ್ಯ ಜೀವನದಲ್ಲಿ ತಾವು ಕಂಡ ತೃಪ್ತಿಯ ಕ್ಷಣ ಯಾವುದು?***

ಪ್ರಾರಂಭ ಮಾಡಿದ್ದು ಸಾಹಿತ್ಯ ವಿಮರ್ಶಕನಾಗಿ, ಸಾಹಿತ್ಯ ಚರಿತ್ರೆಯನ್ನು ಬರೆದವನು. ನಿಘಂಟು ಕ್ಷೇತ್ರಕ್ಕೆ ಹೋದಾಗ 40 ವರ್ಷ. ಬಿ.ಇಡಿ.ಕಾಲೇಜಿನಲ್ಲಿ ಶಿಕ್ಷಕರಿಗೆ 10 ವರ್ಷ ಪಾಠ ಮಾಡಿದ್ದೀನಿ. ಪ್ರೈಮರಿ ತರಗತಿಯಿಂದ ಎಂ.ಎ.ವರೆಗೆ ಪಾಠ ಮಾಡಿದ್ದೀನಿ. ಪ್ರಿನ್ಸಿಪಾಲ್ ಆಗಿ ನಿವೃತ್ತನಾಗಿದ್ದೀನಿ. ಬೋಧನಾ ಸಮಯದಲ್ಲಿ ಪಟ್ಟಂಥ ಸಂತೋಷ, ತೃಪ್ತಿ ನನಗೆ ಮತ್ತೆಲ್ಲೂ ಸಿಕ್ಕಿಲ್ಲ. ಬರವಣಿಗೆ, ಸಂಶೋಧನೆ ಅವೆಲ್ಲಾ ನಿಘಂಟಿನೊಳಗೆ ಸೇರಿಹೋಗಿವೆ. 20 ವರ್ಷ ಮಾಡಿದ ಸಂಶೋಧನೆಯಲ್ಲಿ ಏನ್ ಮಾಡಿದ್ರಿ ಅಂತಾ ನನ್ನ ಯಾರಾದ್ರೂ ಕೇಳಿದ್ರೆ ನಿಘಂಟು ಮಾಡಿದ್ದೇನೆ ಅನ್ನುತ್ತೇನೆ. ■